

Rotary

विश्वमित्रः

ವಿಶ್ವಮಿತ್ರ

VISHWAMITHRA

Weekly House Bulletin of Rotary Club Shimoga, R.I. Dist. 3182

SERVICE ABOVE SELF 2025-26

UNITE FOR GOOD Rotary

Rtn. Francesco Arezzo
RI President 2025-26

| Rtn. K. Palaksha<br>District Governor 2025-26 | Rtn. Anand R.<br>President, Mob: 99800 93066 | Rtn. Vishwas Y.<br>Secretary, Mob : 99800 63180 | Rtn. M. Madhavachar<br>Bulletin Editor, Mob: 98862 73495 |
|---|---|---|---|

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68 ಸಂಚಿಕೆ –08 ದಿನಾಂಕ : 20–08–2025


## ದಿನಾಂಕ: 20.08.2025ರ ವಾರದ ಸಭೆ

**ಗೌರಿ–ಗಣಪತಿ ಹಬ್ಬಗಳು ಸಮೀಪಿಸುತ್ತಿರುವ ಹೊತ್ತಿನಲ್ಲಿ ಆ ಹಬ್ಬಗಳ ವೈಶಿಷ್ಟ್ಯತೆ ವೈಜ್ಞಾನಿಕೆ ಹಿನ್ನೆಲೆ ಬಗ್ಗೆ ಮುಖ್ಯ ಅತಿಥಿಗಳಾದ ವಿದ್ವಾನ್ ಶ್ರೀ ಎಂ.ಎಸ್. ವಿನಾಯಕರವರು ಮಾತನಾಡಿದರು. ವೇದಿಕೆಯಲ್ಲಿ ಮುಖ್ಯ ಅತಿಥಿಗಳೊಂದಿಗೆ ಅಧ್ಯಕ್ಷರಾದ ರೊ.ಆರ್.ಆನಂದ್, ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿ ಇವರುಗಳು ಉಪಸ್ಥಿತರಿದ್ದರು.**









ಪಿಹೆಚ್ಎಫ್. ಶ್ರೀ ಜಿ. ಸತ್ಯನಾರಾಯಣರವರಿಂದ "ಏನು ಧನ್ಯಳೋ ಲಕುಮಿ" ಗೀತೆಯ ಸುಶ್ರಾವ್ಯಗಾಯನ ಪ್ರಾರ್ಥನೆ ಯೊಂದಿಗೆ ಸಭೆ ಆರಂಭ. ಸಹ ಕಾರ್ಯದರ್ಶಿ ರೊ. ಶ್ರೀಕಾಂತ್ ನಾಡಿಗ್‌ರಿಂದ ಸ್ವಾಗತವಾಯಿತು. ಕಾರ್ಯದರ್ಶಿ ರೊ. ವಿಶ್ವಾಸ್ ಎಲಬುರ್ಗಿಯವರಿಂದ ಪ್ರಕಟಣೆಗಳು ಮತ್ತು ಹುಟ್ಟು ಹಬ್ಬದ ಶುಭಾಶಯಗಳ ಪ್ರಕಟಣೆಗಳು. ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಂಡ ರೊ. ಹೇಮಾವತಿ ಮಂಜುನಾಥ್ ಮತ್ತು ಮಾಜಿ ಸಹಾಯಕ ಗವರ್ನರ್ ರೊ. ಎನ್.ಎಸ್. ಶ್ರೀಧರ್‌ರವರು ವೇದಿಕೆಗೆ ಆಗಮಿಸಿ ಹುಟ್ಟು ಹಬ್ಬದ ಶುಭಾಶಯಗಳನ್ನು ಸ್ವೀಕರಿಸಿ ನೆನಪಿನ ಕಾಣಿಕೆ ಪಡೆದುಕೊಂಡರು. ರೊ. ಎನ್. ವಿ. ಭಟ್‌ರವರು ಮುಖ್ಯ ಅತಿಥಿಗಳ ಪರಿಚಯ ಮಾಡಿದರು. ಮುಖ್ಯ ಅತಿಥಿಗಳಾದ ಶ್ರೀ.ಎಂ.ಎಸ್. ವಿನಾಯಕರವರ ಮೂಲ ಸ್ಥಳ ಸೊರಬ ತಾಲೂಕಿನ ಕುಪ್ಪುಗುಡ್ಡೆ. ಕನ್ನಡದಲ್ಲಿ ಎಂ.ಎ.ಪದವೀಧರರಾದ ಇವರು,





ಮೆಟಲರ್ಜಿ ಡಿಪ್ಲೊಮ ಕೂಡ ಮಾಡಿದ್ದು, ಶ್ರೀಯುತರು ಸಂಗೀತ, ಗಮಕ, ನಾಟಕ, ವೇದಗಣಿತ ವ್ಯಕ್ತಿತ್ವ ವಿಕಸನ, ವೇಗ ಗಣಿತ ಅಧ್ಯಯನ, ಕವನ ರಚನೆ, ಕಥೆ ನಾಟಕಗಳ ರಚನೆ, ನೃತ್ಯ ರೂಪಕಗಳ ರಚನೆ, ಲೇಖನಗಳು ಹೀಗೆ ಹತ್ತು ಹಲವಾರು ರಂಗದಲ್ಲಿ ಪ್ರತಿಭೆಯನ್ನು ಹೊಂದಿದವರಾಗಿದ್ದಾರೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾದ ಶ್ರೀ ಎಂ.ಎಸ್. ವಿನಾಯಕರವರು ಮೊದಲಿಗೆ ಎಲ್ಲರಿಗೂ ಗೌರಿ ಗಣೇಶ ಹಬ್ಬದ ಶುಭಾಶಯಗಳನ್ನು ತಿಳಿಸಿ, ಮಾತನಾಡಿದರು. ಮುಸ್ಲಿಂ ಮತ್ತು ಕ್ರಿಶ್ಚಿಯನ್ನರಿಗೆ ಒಬ್ಬ ದೇವರಾದರೆ,

## ಗಮನಿಸಿ

**ದಿನಾಂಕ: 27–08–2025ರ ಸಭೆಯು**

**ಗೌರಿ ಗಣಪತಿ ಹಬ್ಬದ ಪ್ರಯುಕ್ತ ವಾರದ ಸಭೆ ಇರುವುದಿಲ್ಲ**















ಹಿಂದುಗಳಿಗೆ ಎಲ್ಲವೂ ದೇವರು ಮಾತ್ರವಾಗಿದೆ. ಸರಸ್ವತಿ ವಿದ್ಯಾಧಿದೇವತೆ. ಹಸುಗಳನ್ನು ತುಳಿಯ ಬೇಡ, ದೇವರು ಎನ್ನುತ್ತೇವೆ. ನಮಗೆ ಎಲ್ಲವೂ ಪ್ರಕೃತಿಗೆ ಹತ್ತಿರವಾಗಿದೆ. ಅದೂ ದೇವರಾಗಿದೆ. ಶ್ರಾವಣದಲ್ಲಿ ಹಬ್ಬಗಳ ಸಾಲೇ ಇದೆ. ಸಿಕ್ಕಾಪಟ್ಟೆ ಹಬ್ಬಗಳು. ಈ ಹಬ್ಬಗಳು ಮನುಷ್ಯನ ದೈನಂದಿನ ಜೀವನಕ್ಕೆ, ಅವನ ಮನಸ್ಸಿನ ಪ್ರಫುಲ್ಲತೆಗೆ ನೆರವಾಗಿದೆ ಎನ್ನುವುದನ್ನು ಮುಖ್ಯ ಅತಿಥಿಗಳಾದ ವಿದ್ವಾನ್ ಶ್ರೀ ಎಂ.ಎಸ್. ವಿನಾಯಕ್, ಶಿವಮೊಗ್ಗ ಇವರು ಪ್ರತಿಪಾದಿಸಿದರು.

ಕವಿರತ್ನ ಕಾಳಿದಾಸನ ಅಭಿಜ್ಞಾನ ಶಾಕುಂತಲೆ ಕೃತಿಯಲ್ಲಿ ಬರೆದಂತೆ ಮನುಷ್ಯನಿಗೆ ಉತ್ಸವಗಳು ಇಷ್ಟ. ಏಕೆಂದರೆ, ಮನಸ್ಸು ಪ್ರಫುಲ್ಲಿತವಾಗುವುದರಿಂದ, ಮತ್ತು ಎಲ್ಲಾ ಬಂಧು ಬಾಂಧವರು ಒಟ್ಟಾಗಿ ಸೇರುವುದರಿಂದ. ಇದರಿಂದ ಬಾಂಧ್ಯವಗಳು ಬೆಳೆಯುತ್ತದೆ. ಇಲ್ಲಿ ಒಬ್ಬರಿಗೊಬ್ಬರು ಅವಲಂಬಿಸಿ (ಸಹಾಯ ಮಾಡುವುದರೊಂದಿಗೆ) ಹಬ್ಬಗಳನ್ನು ಮಾಡುವುದರಿಂದ ಹಬ್ಬಗಳು ವಿಶೇಷವಾಗಿರುತ್ತದೆ. ಅಕ್ಕ ತಂಗಿ, ಅಣ್ಣ ತಂಗಿಯರು, ಬಂಧು ಬಾಂಧವರು ಹಬ್ಬಗಳಿಗೆ ಬರದಿದ್ದರೆ ಹೇಗೆ ಎಂಬುದಾಗಿ ಜಾನಪದ ಕಥನಗಳೇ ನಮ್ಮಲ್ಲಿವೆ.

ಮನಸ್ಸಿನ ಸಂತೋಷಕ್ಕೆ ಸಂಭ್ರಮಕ್ಕೆ ಹಬ್ಬಗಳು ಬೇಕು. ಉದಾಹರಣೆಗೆ ಗೌರಿ ಹಬ್ಬಕ್ಕೇ ಎಳೆ ಮಾಡುವುದೇ ಒಂದು ಸಂಭ್ರಮ. ಪೆಂಡಾಲ್ ಹಾಕುವುದೇ ಸಂಭ್ರಮ. ಕರ್ನಾಟಕದಲ್ಲಿ ಶಿವಮೊಗ್ಗೆಯನ್ನು ಸಾಂಸ್ಕೃತಿಕ ರಾಜಧಾನಿ ಎಂಬುದಾಗಿ ಗುರುತಿಸಲಾಗಿದೆ. ವಿದ್ಯಾಗಣ ಪತಿಯ ಆವರಣದಲ್ಲಿ ಸಂಗೀತ. ತುಳುಜಾ ಭವಾನಿ ಗಣಪತಿಯಲ್ಲಿ ವೈವಿಧ್ಯಮಯವಾದ ಅಲಂಕಾರಗಳು. ಇವುಗಳನ್ನೆಲ್ಲಾ ನೋಡಲು ಇಡೀ ಕರ್ನಾಟಕದಿಂದ ಜನ ಬರುತ್ತಾರೆ. ಇವುಗಳೆಲ್ಲವೂ ಅದ್ಭುತ ವೈವಿಧ್ಯತೆಯಿಂದ ಕೂಡಿರುತ್ತೆ. ಇಲ್ಲಿ ಕಲಾ ಪ್ರದರ್ಶನಕ್ಕೆ ಅವಕಾಶ ಮತ್ತು ಇದರಿಂದ ಮನೆ ಮನೆಯಲ್ಲೂ ಧಾರ್ಮಿಕ ವಾತಾವರಣ ಬೆಳೆಯುತ್ತದೆ. ಜೊತೆಗೆ ಪೂಜೆಗಳು ನಡೆಯುತ್ತದೆ.

ಇಲ್ಲಿ ಅವಲಂಬನೆ ಎಂದರೆ, ಒಂದು ಬಾಗಿನ ತೆಗೆದುಕೊಳ್ಳಲು ಎಲ್ಲರನ್ನೂ ಅವಲಂಬಿಸಬೇಕು. ಉದಾಹರಣೆಗೆ ಅದನ್ನು ತಯಾರು ಮಾಡುವವರು, ಮಾರುವವರು, ಮಾರುಕಟ್ಟೆಗೆ ಒದಗಿಸುವವರು. ಇದೆಲ್ಲವೂ ಸಮಾಜಕ್ಕೆ ಬೇಕು. ಇವೆಲ್ಲವೂ ಅನಾವಶ್ಯಕ ಖರ್ಚುಗಳಲ್ಲ. ಹಣವೂ ಎಲ್ಲಾ ಕಡೆಯಲ್ಲಿಯೂ ಹಂಚಿಕೆಯಾಗಬೇಕು ಎಂಬ ತತ್ವವೇ ಆಗಿದೆ. ಉದಾಹರಣೆ ನೀಡಿದ ಮುಖ್ಯ ಅತಿಥಿಗಳು ಉತ್ತರ ಭಾರತದಲ್ಲಿ 12 ವರ್ಷಗಳಿಗೊಮ್ಮೆ ನಡೆಯುವ ಕುಂಭ ಮೇಳಕ್ಕಾಗಿ, ಜನರು ಆಗಮಿಸಬೇಕೆಂಬ ದೃಷ್ಟಿಯಿಂದ ಅಷ್ಟು ವರ್ಷಗಳು ದುಡಿಯುತ್ತೇವೆ ಎಂಬ ಅಲ್ಲಿನ ಜನರ ಮಾತು ಮತ್ತು ಭಾವನೆ ಮನನೀಯ ಎಂದರು. ಅವರೆಲ್ಲರೂ ಜನರ ಆಹ್ವಾನಕ್ಕೆ ಕಾದಿರುತ್ತಾರೆ. 15 ದಿನಗಳ ಕಾಲ ಅವರ ವಹಿವಾಟು ಯಾವುದೂ ಇರುವುದಿಲ್ಲ. ಅವರು ದುಡಿದಿದ್ದನ್ನು ಬೇರೆಯವರಿಗೆ ಹಂಚಲು ಕಾದಿರುತ್ತಾರೆ. ಈ ನೆಪದಿಂದ ಸಮಾಜಕ್ಕೆ ಅನುಕೂಲ ಮಾಡಿಕೊಡುತ್ತಾರೆ. ಸಮಾಜಕ್ಕಾಗಿ ಯಾರು ದುಡಿದಿದ್ದಾರು ಅವರುಗಳನ್ನು ಜ್ಞಾಪಕವಿಟ್ಟುಕೋ ಎಂಬ ಸಂದೇಶ ಮುಂದಿನ ಜನಾಂಗಕ್ಕೆ ಗೊತ್ತಾಗಬೇಕು ಎನ್ನುವುದಕ್ಕಾಗಿಯೇ ಗೋಕುಲಾಷ್ಟಮಿ, ರಾಮನವಮಿ ಇವೆಲ್ಲಾ ಆಚರಣೆಗಳು. ರಾಮಕೃಷ್ಣರಂಥವರು ಸಮಾಜಕ್ಕೆ ಏನು ಕೊಡುಗೆ ನೀಡಿದ್ದಾರೆ. ಜನರ ಅಭ್ಯುದಯವನ್ನು ಹೇಗೆ ಪುನರುತ್ಥಾನಗೊಳಿಸಿದ್ದಾರೆ ಎಂದು ಇವುಗಳು ಸೂಚಿಸುತ್ತದೆ ಎಂದರು.

ಪೂಜೆ ವ್ರತ ಆಚರಣೆ ಬಗ್ಗೆ ಮಾತನಾಡಿದ ಮುಖ್ಯ ಅತಿಥಿಗಳಾದ ಶ್ರೀ ವಿನಾಯಕರವರು, ಸ್ವರ್ಣಗೌರಿ ವ್ರತದ ಬಗ್ಗೆ ಮಾತನಾಡುತ್ತಾ ಅದರ ವೈಜ್ಞಾನಿಕ, ವೈಚಾರಿಕ ಚಿಂತನೆ ತಿಳಿದುಕೊಳ್ಳಬೇಕು. ವಿವಾಹ ಪೂರ್ವದಲ್ಲಿ ಗೌರಿ ಪೂಜೆ ಹಿಡಿದು ಬೇರೆ ಬೇರೆ ಸಂದರ್ಭಗಳಲ್ಲಿ ಪೂಜೆ ಮಾಡುತ್ತೇವೆ. ಸ್ವರ್ಣಗೌರಿ ಪೂಜೆಗೆ ಗೌರಿ ಬೇಗ ಒಲಿಯುವಳು ಎಂಬ ಪ್ರತೀತಿ ಇದೆ. ಗೌರ ಎಂದರೆ ಬಿಳಿಯ ಬಣ್ಣ. ಬಿಳಿಯ ಸಂಪಿಗೆ ಬಣ್ಣದಿಂದಿದ್ದಾಳೆ ಈಶ್ವರನ ಹೆಂಡತಿ, ದಾಕ್ಷಾಯಿಣಿ, ಹಿಮಾಲಯದಲ್ಲಿ ಹಿಮವಂತನ ಮಗಳಾಗಿ ಜನಿಸಿದ ಇವಳನ್ನು ಗೌರ ಎಂದು ಕರೆಯುವರು ಎಂದರು.

ಒಂದೊಂದು ಪ್ರದೇಶದಲ್ಲಿ ಒಂದೊಂದು ಹೆಸರಿನಲ್ಲಿ ಗೌರಿಯನ್ನು ಕರೆಯುವರು. ಜೀವನದಲ್ಲಿ ಯಶಸ್ಸನ್ನು ಕಾಣಲು ಗೌರಿ ಪೂಜೆ ಮಾಡಬೇಕು. ದಾಂಪತ್ಯ ಜೀವನ ಯಶಸ್ವಿಯಾಗಲು ದಂಪತಿಗಳಲ್ಲಿ ಅನುರಾಗವಿರಬೇಕು. ಪ್ರೇಮವಿರಬೇಕು. ಇದಕ್ಕೆ ಪಾರ್ವತಿಯ ಪೂಜೆಯಾಗಬೇಕು. ಏಕೆಂದರೆ ಭಿಕ್ಷುಕನಾದ, ಮೈ ಮೇಲೆ ಬಟ್ಟೆಯಿಲ್ಲದ ಜಗದೊಡೆಯನಾದ ಈಶ್ವರನನ್ನು ತಪಸ್ಸು ಮಾಡಿ ಒಲಿಸಿಕೊಂಡವಳು ಶ್ರೀಮಂತಳಾದ ಪಾರ್ವತಿ. ವಿದ್ಯೆ ಬೇಕಾದರೆ ಈಶ್ವರನನ್ನು ಪೂಜಿಸಬೇಕು. ಇಲ್ಲಿ ವ್ಯಕ್ತಿತ್ವ ಮುಖ್ಯವಾಗಿರುತ್ತದೆ. ಅನುರಾಗ ಪ್ರೀತಿ ಮುಖ್ಯವಾಗಿರುತ್ತದೆ. ಗಂಡನ ಮೇಲಿನ ಪ್ರೀತಿಯ ಬಗ್ಗೆ ಹಲವಾರು ಕವಿಗಳ ಬರಹಗಳ ಬಗ್ಗೆ ಉದಾಹರಿಸಿದರು– ಹಾಗೇ ನೋಡ್ತಾ ನೋಡ್ತಾ ಹೋದರೆ ನನ್ನ ಲಕುಮಿಗೆ ಒಳ್ಳೆಯವಳು. ಗಟ್ಟಿಯಾಗೇನೂ ಮಾತಾಡ್ತಾಳೆ ಆದರೂನೂ ಅವಳೇ ಒಳ್ಳೆಯವಳು ಎಂಬ ಕವಿ ವಾಣಿಯನ್ನು ಉಲ್ಲೇಖಿಸಿದರು.

ಗಂಡನಿಗೆ ಹೆಂಡತಿ ಬಗ್ಗೆ ಗೌರವವಿರುತ್ತದೆ. ಅವಳು ಲೋಕ

ಯಾತ್ರಾನುವರ್ತಿನಿ. ಆತ್ಮ ಸಖಿ. ದಾಂಪತ್ಯ ಭಾವ ಬೆಳೆಯುವುದು ಹೇಗೆ ಎಂದರೆ, ಪಾರ್ವತಿ ಪೂಜೆಯಿಂದ. ಹಾವಿನಾಭರಣ, ಅರ್ಧನಾರೀಶ್ವರನ ಪೂಜೆ ಏಕೆಂದರೆ, ಸದಾಕಾಲ ದಂಪತಿಗಳ ಮನಸ್ಸಿನಲ್ಲಿ ಅವರೀರ್ವರ ಬಗ್ಗೆ ಉತ್ತಮ ಭಾವ ಉಳಿಯಬೇಕಾಗಿರುವುದರಿಂದಲೇ ಈ ಪೂಜೆ.

ಗಣಪತಿ ಪೂಜೆ ಬಗ್ಗೆ ಮಾತನಾಡಿದ ಮುಖ್ಯ ಅತಿಥಿಗಳು, ಈತ ಮಾತೃ ಪ್ರಧಾನವಾಗಿ ಹುಟ್ಟಿದವನು. ಪಿತೃ ಪ್ರಧಾನ ದೇವತೆಯಲ್ಲ. ಪಾರ್ವತಿಯ ದೇಹದ ಬೆವರಿನ ಮಣ್ಣಿನಿಂದ ಹುಟ್ಟಿದವನು. ಇವೆಲ್ಲವೂ ಪ್ರಕೃತಿತತ್ವ, ಪೃಥ್ವಿತತ್ವ, ಪಂಚತತ್ವ, ಜಲತತ್ವ, ವಾಯು ತತ್ವಗಳನ್ನು ಸಾರುತ್ತವೆ. 1986 ರಲ್ಲಿ ಕುರಿಯ ಕ್ಲೋನಿಂಗ್–ಕುರಿಯ ದೇಹದ ಒಂದು ಸೆಲ್‌ನಿಂದ ಕುರಿಯ ನಿರ್ಮಾಣವಾಗಿದೆ. ನಮ್ಮ ಆಚರಣೆಗಳು ಮೂಢನಂಬಿಕೆ ಎನ್ನುವವರು ಇವುಗಳನ್ನು ಗಮನಿಸಬೇಕು. ಹಾಗಾದರೆ ಬೇರೆಯವರು ಮಾಡಿದ್ದು ಸರಿಯೇ ಎಂದು ಪ್ರಶ್ನಿಸಿದ ಅವರು, ಪೃಥ್ವಿ ತತ್ವದ ರೂಪವಾಗಿಯೇ ಗಣಪನನ್ನು ನೋಡುತ್ತೇವೆ.

ಉತ್ತರ ದಿಕ್ಕಿಗೆ ತಲೆ ಇಟ್ಟು ಮಲಗಬೇಡ ಎಂದು ಆಗಲೇ ನಮ್ಮವರು ಹೇಳಿದ್ದರು. ಆ ಕಾಲದಿಂದಲೇ ನಮ್ಮವರಿಗೆ ಗೊತ್ತಿತ್ತು. ಭೂಮಿಯು ಅಯಾಸ್ಕಾಂತಿಯ ಗುಣ ಹೊಂದಿದೆ. ಅದರಲ್ಲೂ ಉತ್ತರ ದಿಕ್ಕಿನಲ್ಲಿ ಅಯಾಸ್ಕಾಂತೀಯ ಗುಣ ಹೆಚ್ಚಾಗಿದ್ದು, ನಮ್ಮ ದೇಹಕ್ಕೆ ಪ್ರತಿಕೂಲ ಪರಿಣಾಮವಾಗುತ್ತೆ ಎಂದು ತಿಳಿದಿತ್ತು. ಇವೆಲ್ಲವನ್ನೂ ಮುಂದಿನ ಪೀಳಿಗೆಗೆ ತಲುಪಿಸುವುದು ಹೇಗೆ ಅದಕ್ಕಾಗಿ ಇವೆಲ್ಲ ಆಚರಣೆಗಳು. 2005 ರಲ್ಲಿ ನಡೆದ ಪ್ಲಾಸ್ಟಿಕ್ ಸರ್ಜನ್ ಸಮ್ಮೇಳನದಲ್ಲಿ, ಆ ಸಮ್ಮೇಳನದ ಅಧ್ಯಕ್ಷರು ಪ್ಲಾಸ್ಟಿಕ್ ಸರ್ಜರಿ ಬಂದದ್ದೇ ಭಾರತದಲ್ಲಿ ಮೊದಲು. ಏಕೆಂದರೆ ಆನೆಯ ಮುಖವನ್ನು ಗಣಪತಿಗೆ ಜೋಡಿಸಿದ್ದುದು ಮಹತ್ತರ ಸಾಧನೆ. ಭಾರತೀಯರ ವೈಜ್ಞಾನಿಕ ಸಂಶೋಧನೆಯಾಗಿದೆ ಎಂದರು.

ಗಣಪತಿ 21 ತತ್ವಗಳಿಗೆ ಅಧಿಪತಿ. ಆದ್ದರಿಂದಲೇ 21 ದೂರ್ವೆಯಿಂದ ಪೂಜೆ. ಸುವ್ಯವಸ್ಥಿತ ಮನಸ್ಸಿಗೆ, ನಮ್ಮ ದೇಹದ ಆರೋಗ್ಯಕ್ಕೆ ಗಣಪನ ಪೂಜೆಯನ್ನು ಮಾಡುವರು ಎಂದು ವಿವರವಾಗಿ ತಿಳಿಸಿದರು. ನೀರಲ್ಲೇ ಏಕೆ ವಿಸರ್ಜನೆ ಮಾಡುತ್ತಾರೆ ಎಂಬುದಕ್ಕೆ ವೈಜ್ಞಾನಿಕ ಹಿನ್ನೆಲೆಯನ್ನು ತಿಳಿಸಿದರು. ಮಣ್ಣಿನಿಂದಲೇ ತಯಾರಿಸಿದ ಗಣಪನನ್ನು ಏಕೆ ಪೂಜೆ ಮಾಡಬೇಕು ಎಂಬುದನ್ನು ತಿಳಿಸಿದರು. ಶಮಂತಕ ಮಣಿಕಥೆ ಇವುಗಳೆಲ್ಲದರ ಹಿನ್ನೆಲೆ ವಿವರಿಸಿದರು. ರೊ.ಎಸ್.ಜಿ. ಗೋಪಾಲರ ಪ್ರಶ್ನೆಗಳಿಗೆ ಉತ್ತರಿಸಿದರು.

ಅಧ್ಯಕ್ಷರಾದ ರೊ.ಆರ್.ಆನಂದರವರು ಮಾತನಾಡಿ, ಪ್ರಸ್ತುತಕ್ಕೆ ಸರಿಯಾಗಿ ಮುಖ್ಯ ಅತಿಥಿಗಳು ಮಾತನಾಡಿ, ಹಲವಾರು ವಿಷಯಗಳನ್ನು ತಿಳಿಸಿದ್ದಾರೆ ಎಂದು ತಮ್ಮ ಕೃತಜ್ಞತೆ ತಿಳಿಸಿ, ಅವರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ಕೊನೆಯಲ್ಲಿ ರೊ. ಎಂ.ವಿ. ನಾಗೇಶ್‌ರವರಿಂದ ವಂದನೆಯಾಯಿತು.




**ಸೆಂಟಿನರಿ ಫೌಂಡೇಶನ್‌ಗೆ ರೊ. ಸೂರ್ಯನಾರಾಯಣ ಉಡುಪ ಮತ್ತು ರೊ. ಎನ್.ಜಿ ಉಷಾರವರು ಸುಮಾರು ರೂ. 5000/– ಮೌಲ್ಯದ ಏಣಿಯನ್ನು ಕೊಡುಗೆಯಾಗಿ ನೀಡಿರುತ್ತಾರೆ.**

## "CSR INITITATIVES IN ROTARY"







**ದಿನಾಂಕ 17–8–25 ರಂದು ರೋಟರಿ ಕ್ಲಬ್ ಶಿವಮೊಗ್ಗ ನೇತೃತ್ವದಲ್ಲಿ "CSR Inititatives in Rotary" ಎಂಬ ವಿಷಯ ಕುರಿತು ಅಧ್ಯಕ್ಷರು, ನಿಯೋಜಿತ ಅಧ್ಯಕ್ಷರು, ಕಾರ್ಯದರ್ಶಿಗಳು, ಸಂಯೋಜಕರುಗಳಿಗೆ ಕಾರ್ಯಾಗಾರವನ್ನು ರೋಟರಿ ಕ್ಲಬ್ ಯುತ್ ಸೆಂಟರ್ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು.**

ಪ್ರಾರಂಭದಲ್ಲಿ ಕ್ಲಬ್‌ನ ಅಧ್ಯಕ್ಷರಾದ ರೊ.ಆನಂದ ಆರ್. ರವರು ಸರ್ವರನ್ನು ವಂದಿಸುತ್ತಾ ನಾವಿಲ್ಲಿ ಸೇರಿರುವುದು ಕೇವಲ ವೃತ್ತಿ ನಿರತರಾಗಿ ಅಲ್ಲ ಆದರೆ ಬದಲಾವಣೆ ತರುವವರಾಗಿ ಬಂದಿದ್ದೇವೆ. ಉದ್ಯಮ ಶೀಲತೆ ಮತ್ತು ಸಹಾನುಭೂತಿಯ ನಡುವಿನ ಸೇತುವೆಯಾಗಿರುವ ಸ್ವಾರ್ಥಕ್ಕಿಂತ ಸೇವೆಯೇ ಮೇಲು ಎನ್ನುವುದರಲ್ಲಿ ವಿಶ್ವಾಸ ಇಟ್ಟಿರುವ ನಮಗಿಂತ ಇನ್ನಾರು CSR ಅವಕಾಶಗಳನ್ನು ಬಳಸಿಕೊಳ್ಳಲು ಸಾಧ್ಯ? ಈ ಸೆಮಿನಾರ್ ಅರ್ಥಪೂರ್ಣವಾಗಲಿ ಎಂದು ಹೇಳುತ್ತಾ ನಮ್ಮ ದೂರದೃಷ್ಟಿ, ಅನುಭವ ಮತ್ತು ಯೋಜನೆಗಳನ್ನು ಒಂದು ಕಾರ್ಯರೂಪಕ್ಕೆ ತರೋಣ ಎಂದು ಆಶಿಸಿದರು. ಚೇರ್‌ಮನ್ CSR ರೊ. ವೀರಣ್ಣ ಹುಗ್ಗಿಯವರು ಈ ಸೆಮಿನಾರ್‌ನ ಉದ್ದೇಶ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿ ಮುಂದಿನ ದಿನಗಳಲ್ಲಿ CSR ನಿಧಿಯನ್ನು ನಾವು ಸಾಮಾಜಿಕ ಕಾರ್ಯಗಳಿಗೆ ಹೇಗೆ ಪಡೆಯಬೇಕು ಎಂಬುದನ್ನು ತಿಳಿಸಲು ಅನುಭವಿ ಸಂಪನ್ಮೂಲ ವ್ಯಕ್ತಿಗಳು ನಿಮ್ಮನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ನಾವೆಲ್ಲ ಇದರ ಪ್ರಯೋಜನ ಪಡೆಯೋಣ ಎಂದರು.

ಸಮಾರಂಭದ ಉದ್ಘಾಟನೆಯನ್ನು ಮಾಡಿದ ಜಿಲ್ಲಾ ಗವರ್ನರ್ ರೊ. ಪಾಲಾಕ್ಷ ಕೆ. ಇವರು ಮಾತನಾಡಿ ಇದುವರೆಗೆ CSR ಅನ್ನುವುದು ಒಂದು ಕನಸಾಗಿತ್ತು. ಇದನ್ನು ನನಸು ಮಾಡುವ ಅವಕಾಶ ಈಗ ಬಂದಿದೆ. ಬಹಳಷ್ಟು ಜಿಲ್ಲೆಗಳಲ್ಲಿ ಇದು ಅನುಷ್ಠಾನಕ್ಕೆ ಬಂದಿಲ್ಲ. ಮುಂಬಯಿ, ಬೆಂಗಳೂರು, ಕೋಲಾರ, ದೆಹಲಿ, ಚೆನ್ನೈ ಮತ್ತು ಜಿಲ್ಲೆಗಳಲ್ಲಿ ಬಹಳ ಕೆಲಸ ಮಾಡುತ್ತಿದ್ದಾರೆ. ನಾವು ಈಗ ಪ್ರಾರಂಭ ಮಾಡಿದರೆ ನಾವು ಮುಂದಿನ ದಿನಗಳಲ್ಲಿ ನಮಗೆ ಫಲ ಸಿಗುತ್ತದೆ. ಇದರ ರೂಪುರೇಷೆಗಳನ್ನು ಈ ಸೆಮಿನಾರ್‌ನಲ್ಲಿ ಪಡೆದು ಕಾರ್ಯ ಪ್ರವೃತ್ತರಾಗೋಣ. ಶಿಕ್ಷಣ, ಆರೋಗ್ಯ, ಪರಿಸರ, ಕೆರೆ ಹೂಳು ತೆಗೆಯುವ ಮುಂತಾದ ಸಮಾಜಮುಖಿ ಕಾರ್ಯಕ್ರಮಗಳನ್ನು ಗುರುತಿಸಿ ಎಲ್ಲ ಸದಸ್ಯರು ಇದರಲ್ಲಿ ಭಾಗವಹಿಸಬೇಕೆಂದು ತಿಳಿಸಿದರು. ನಿಯೋಜಿತ ಗವರ್ನರ್ ವಸಂತ ಹೋಬಳಿದಾರ್‌ರವರು ಕಂಪನಿಗಳ ಸಾಮಾಜಿಕ ಜವಾಬ್ದಾರಿ CSR ಅಂದರೆ ಏನು, ಹೇಗೆ ಪ್ರಯೋಜನೆ ಪಡೆದುಕೊಳ್ಳಬಹುದು ಎಂದು ವಿವರಿಸುತ್ತಾ, ಜನ್ಮದಲ್ಲಿ ದಾನ, ಧರ್ಮ ಬಂದಿರುವುದಕ್ಕೆ ಕರ್ಣ ಒಂದು ಉದಾಹರಣೆ. ಇದರ ವಿಕಾಸವೇ ಇಂದಿನ CSR ಎಂದು ಹೇಳುತ್ತ, ಮಠ ಮಾನ್ಯಗಳು ದಾನ ಮಾಡುವುದು ಅದರಿಂದ ಸಮಾಜ ಪರಿವರ್ತನೆ ಹೀಗೆ 1956 ರಿಂದ 2013 ರ ವರೆಗಿನ ಕಂಪನಿ ಕಾಯಿದೆಗಳ ಬಗ್ಗೆ

ಮುಂದಿನ ಪುಟಕ್ಕೆ...

## ಸಂಪಾದಕೀಯ



### ಕೊನೆಯವರೆಗೂ ಓದಿ...!

ಖ್ಯಾತ ಇನ್ವೆಸ್ಟರ್ ಹಾಗೂ ಸ್ಟಾಕ್ ಟ್ರೇಡರ್ ರಾಕೇಶ್ ಜುನ್‌ಜುನ್‌ವಾಲಾ ಅವರು 45000 ಕೋಟಿ ನಿವ್ವಳ ಮೌಲ್ಯದೊಂದಿಗೆ ನಿಧನರಾಗುವ ಮೊದಲು ಅವರ ಕೊನೆಯ ಮಾತುಗಳು...



ವ್ಯಾಪಾರ ಜಗತ್ತಿನಲ್ಲಿ ನಾನು ಯಶಸ್ಸಿನ ಶಿಖರವನ್ನು ತಲುಪಿದ್ದೇನೆ. ಇತರರ ದೃಷ್ಟಿಯಲ್ಲಿ ನನ್ನ ಜೀವನವೇ ಸಾಧನೆ. ಆದರೆ, ಕೆಲಸ ಬಿಟ್ಟರೆ ನನಗೆ ಯಾವ ಸುಖವೂ ಇರಲಿಲ್ಲ. ಹಣವು ನಾನು ಬಳಸುವ ಸತ್ಯ ಮಾತ್ರ. ಈ ಹಂತದಲ್ಲಿ ಆಸ್ಪತ್ರೆಯ ಬೆಡ್‌ನಲ್ಲಿ ಮಲಗಿ ನನ್ನ ಇಡೀ ಜೀವನವನ್ನು ಹಿಂತಿರುಗಿ ನೋಡಿದಾಗ, ನಾನು ಹೆಮ್ಮೆಪಡುತ್ತಿದ್ದೆ. ಗುರುತು ಮತ್ತು ಹಣವು ಸಾವಿನ ಮೊದಲು ಮರೆಯಾಯಿತು ಮತ್ತು ನಿಷ್ಪ್ರಯೋಜಕವಾಗಿದೆ ಎಂದು ನಾನು ಅರಿತುಕೊಂಡೆ. ನಮ್ಮ ಕಾರನ್ನು ಓಡಿಸಲು ಅಥವಾ ಹಣ ಸಂಪಾದಿಸಲು ನಾವು ಯಾರನ್ನಾದರೂ ನೇಮಿಸಿಕೊಳ್ಳಬಹುದು. ಆದರೆ, ನರಳಲು ಮತ್ತು ಸಾಯಲು ಯಾರನ್ನಾದರೂ ನೇಮಿಸಿಕೊಳ್ಳಲು ಸಾಧ್ಯವಿಲ್ಲ! ಕಳೆದುಹೋದ ಭೌತಿಕ ವಸ್ತುಗಳನ್ನು ಕಾಣಬಹುದು. ಆದರೆ ಕಳೆದುಹೋದಾಗ ಎಂದಿಗೂ ಸಿಗದ ಒಂದು ವಸ್ತುವಿದೆ. ಅದೇ "ಜೀವನ".

ಜೀವನದ ಯಾವುದೇ ಹಂತದಲ್ಲಿದ್ದರೂ ಕಾಲಾಂತರದಲ್ಲಿ ಹೃದಯ ನಿಲ್ಲುವ ದಿನವನ್ನು ಎದುರಿಸುತ್ತೇವೆ. ನಮ್ಮ ಕುಟುಂಬ, ಸಂಗಾತಿ ಮತ್ತು ಸ್ನೇಹಿತರನ್ನು ಪ್ರೀತಿಸೋಣ. ರೂ. 300 ಅಥವಾ ರೂ. 3 ಲಕ್ಷವಿದ್ದ ವಾಚ್ ಧರಿಸಿದರೂ ಎಲ್ಲವೂ ಒಂದೇ ಸಮಯವನ್ನು ಹೇಳುತ್ತದೆ ಎಂದು ನಾವು ನಿಧಾನವಾಗಿ ಅರ್ಥಮಾಡಿಕೊಳ್ಳುತ್ತೇವೆ.

ನೀವು ಫಸ್ಟ್ ಕ್ಲಾಸ್ ಅಥವಾ ಏಕಾನಮಿ ಕ್ಲಾಸ್‌ನಲ್ಲಿ ಹಾರಿದರೂ, ವಿಮಾನ ಕೆಳಗೆ ಬಿದ್ದರೆ, ನೀವು ಕೆಳಗೇ ಬೀಳುತ್ತೀರಿ. ಅದಕ್ಕಾಗಿಯೇ ನೀವು ಅರಿತುಕೊಳ್ಳುತ್ತೀರಿ ಎಂದು ನಾನು ಭಾವಿಸುತ್ತೇನೆ. ನಿಮಗೆ ಸ್ನೇಹಿತರು, ಸಹೋದರರು ಮತ್ತು ಸಹೋದರಿಯರು, ಸಂಸಾರ, ಮಕ್ಕಳು ಇದ್ದಾರೆ. ಅವರೊಂದಿಗೆ ಹರಟೆ, ನಗು, ಹಾಡಿ ಸಂತೋಷವನ್ನು ಹಂಚಿಕೊಳ್ಳುತ್ತೀರಿ. ಅದು ನಿಜವಾದ ಸಂತೋಷ.

ಆಸ್ಪತ್ರೆಯಲ್ಲಿ 'ಆರೋಗ್ಯಕ್ಕಿಂತ ಉತ್ತಮವಾದುದು ಯಾವುದೂ ಇಲ್ಲ'. ನಿಜವಾದ ಆಂತರಿಕ ಸಂತೋಷವು ಯಾವುದೇ ಭೌತಿಕ ವಸ್ತುವಿನಿಂದ ಬರುವುದಿಲ್ಲ. ಇನ್ನೊಬ್ಬರ ಕಷ್ಟಕ್ಕೆ ಸ್ಪಂದಿಸಿ ಸಂತೋಷಕ್ಕೆ ಕಾರಣರಾದಾಗ ಮಾತ್ರ ಸಂತೋಷವು ಸದಾ ನಿಮ್ಮೊಂದಿಗಿರುತ್ತದೆ.

• ರೊ. ಎಂ. ಮಾಧವಾಚಾರ್

## Happy Birthday Wishes



*Pavan M P*
*21st Aug*



*Sumalatha Bhoopalam*
*21st Aug*



*Mallika V. Jois*
*28th Aug*



*Dasharath K. C.*
*01st Sep*



*Rekha Patil T. S.*
*01st Sept*



*K.S.Shailin*
*3rd Sept*

**CSR Inititatives in Rotary ಹಿಂದಿನ ಪುಟದಿಂದ...**

ತಿಳಿಸುತ್ತಾ ಕಂಪನಿಯ ವಾರ್ಷಿಕ ವಹಿವಾಟು ಹಿಂದಿನ ವರ್ಷದಲ್ಲಿ 1000 ಕೋಟಿ, ಅಥವಾ ಕಂಪನಿ ನಿವ್ವಳ ಮೌಲ್ಯ

500 ಕೋಟಿ ಅಥವಾ 5 ಕೋಟಿ ಲಾಭ ಇರುವ ಕಂಪನಿಗಳು ಲಾಭದಲ್ಲಿ ಶೇ 2 ರಷ್ಟನ್ನು ಸಾಮಾಜಿಕ ಕಾರ್ಯಗಳಿಗೆ ಶೆಡೂಲ್ 7 ರಲ್ಲಿ ತಿಳಿಸಿದ 12 ವಿವಿಧ ಚಟುವಟಿಕೆಗಳಲ್ಲಿ ವಿನಿಯೋಗಿಸಬಹುದು. ಅವುಗಳನ್ನು ಪ್ರಮುಖವಾಗಿ ಶಿಕ್ಷಣ, ಆರೋಗ್ಯ ಮತ್ತು ಪರಿಸರಕ್ಕೆ ಹೆಚ್ಚಿನ ಒತ್ತುಕೊಡಲಾಗಿದೆ. ಸಮಾಜದಲ್ಲಿ ಪ್ರಮುಖ ಬದಲಾವಣೆ ತಂದು ಸಮುದಾಯದ ಅಭಿವೃದ್ಧಿಗೆ ಪೂರಕವಾಗುವಂತಹ ಯೋಜನೆಗಳನ್ನು ಈ ಅನುದಾನದಿಂದ ಮಾಡಬಹುದು ಎಂದರು.

ಮುಖ್ಯ ತರಬೇತಿದಾರರಾಗಿ ಬಂದ ರೊ. ಕಾಶಿನಾಥ ಪ್ರಭುರವರು ಕಳೆದ 5 ವರ್ಷಗಳಿಂದ ಈ ಯೋಜನೆಯಲ್ಲಿ ತೊಡಗಿಸಿಕೊಂಡಿದ್ದು ಇದರ ಸಾಧ್ಯಾಸಾಧ್ಯತೆಗಳ ಕುರಿತು ವಿವರವಾಗಿ ತಿಳಿಸುತ್ತಾ ಈ ಕೆಳಕಂಡ ಅಂಶಗಳ ಬಗ್ಗೆ ಮಾಹಿತಿ ನೀಡಿದರು.

1. Tripple Bottom Line (People,Profit and Benefit)
2. Voluntary/Mandatory
3. 2% contribution through 2013 Act
4. Whome to Contribute(NGO, importantly Charitable Trust
5. Through TRF Delhi Office
6. Why Rotary ideal for CSR Project
7. Benefits of CSR in Rotary
8. CSR Outlook option for NGO's
9. CSR in India

ಡಾ. ಸುಧೀರ ಬೆಂಗಳೂರು ಕಾರ್ಯದರ್ಶಿಗಳು ಜಿಲ್ಲಾ ಯೋಜನೆ ಇವರು ಮಾತನಾಡಿ ಶಿಕ್ಷಣ ಆರೋಗ್ಯ ಮತ್ತು ಸಂಚಾರ ಜಾಗ್ರತಿ ವಿಷಯಗಳಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ವಿವರಿಸಿದರು. ಜಿಲ್ಲಾ ರೋಟರಿ ಫೌಂಡೇಶನ್ ಚೇರ್ಮನ್ ಮಾಜಿ ಜಿಲ್ಲಾ ಗವರ್ನರ್ ರೊ.ಡಿ.ಎಸ್. ರವಿರವರು ಮಾತನಾಡಿ ಗ್ಲೋಬಲ್ ಗ್ರ್ಯಾಂಟ್ ಅಡಿ ಕಡಿಮೆ ಅವಕಾಶಗಳಿದ್ದು CSR ನಲ್ಲಿ ಸಾಕಷ್ಟು ಅವಕಾಶಗಳು ಇರುವುದನ್ನು ತಿಳಿಸಿ ಇದರ ಪ್ರಯೋಜನ ಪಡೆಯುವಂತೆ ಸಲಹೆ ಮಾಡಿದರು. ಸಮೂಹ ಚರ್ಚೆಯಲ್ಲಿ ಕೆಲವು ಸದಸ್ಯರು ತಮ್ಮ ಪ್ರಶ್ನೆಗಳಿಗೆ ಸಂಪನ್ಮೂಲ ವ್ಯಕ್ತಿಗಳವರಿಂದ ಸಮಾಧಾನಕರ ಉತ್ತರ ಪಡೆದರು. ಮಾಜಿ ಜಿಲ್ಲಾ ಗವರ್ನರ್ ಡಿಆರ್‌ಎಫ್‌ಸಿ ಡಿ.ಎಸ್ .ರವಿಯವರು ತಮ್ಮ ಟಿಪ್ಪಣಿ ನೀಡುತ್ತಾ ಸೆಮಿನಾರ್ ನ ಲಾಭ ಪಡೆಯುವಂತೆ ತಿಳಿಸಿದರು. ಕೊನೆಯಲ್ಲಿ ಕಾರ್ಯದರ್ಶಿಗಳಾದ ರೊ. ವೈ. ವಿಶ್ವಾಸ್‌ರವರು ಸರ್ವರನ್ನು ವಂದಿಸಿದರು.

## Happy Wedding Anniversary

| | |
|---|---|
| *Dr.Girish Kumar & Dr. Shobha Girish* | *12th August* |
| *Suryanarayana Udupa & Usha N.G.* | *23rd August* |
| *Shashidhara N.G. & K. Anupama* | *27th August* |

To,

*Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495